**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 100/2018.**

**ಸಿ.ಡಬ್ಲ್ಯೂಃ–10 ಪಿ.ಡಬ್ಲ್ಯೂಃ–11**

**ದಿಃ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಶಾನಕ್ಕಾ ಬೀರಪ್ಪಾ ಹರಕೆ |
| ವಯಸ್ಸು | : | 30 ವರ್ಷ. |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಜೋಡಕುರಳಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ನನ್ನ ಮಾಮ. ಚಾ.ಸಾ.4 ರಿಂದ 9 ಮತ್ತು 11 ನನ್ನ ಸಂಬಂಧಿಕರು.

2) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

3) ಈಗ್ಗೆ 10–12 ವರ್ಷಗಳ ಹಿಂದೆ ಸಾಯಂಕಾಲ 05.00 ಗಂಟೆ ಸುಮಾರಿಗೆ ನಮ್ಮ ಹೊಲದಲ್ಲಿ ನಮ್ಮ ಗಂಡು ಮಕ್ಕಳು ಟ್ರ್ಯಾಕ್ಟರನಿಂದ ಗಳೆ ಹೊಡೆಯುತ್ತಿದ್ದಾಗ ಆರೋಪಿತರೆಲ್ಲರೂ ಬಂದು ಬಡಿಯುತ್ತಿದ್ದರು. ಆ

ಕಾಲಕ್ಕೆ ನಾನು ಮನೆ ಒಳಗೆ ಇದ್ದೆ. ಹೊರಗೆ ಬಂದು ನೋಡಿದೆ. ಬಿಡಿಸಲು ಹೋದಾಗ ನಮಗೂ ಬಡಿದರು. ಯಾವ ಕಾರಣಕ್ಕೆ ಬಡಿಯುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಹೊಲದಲ್ಲಿ ಪಾಲಾ ಮಾಡಿಕೊಡಿ ಅಂತಾ ಕೇಳಿ ಬಡಿಯುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿತರ ಪೈಕಿ ನಿಂಗಪ್ಪಾ ಕಲ್ಲಿನಿಂದ ಮತ್ತು ಲಕ್ಷ್ಮಣ ಕಟ್ಟಿಗೆಯಿಂದ ನನಗೆ ಬಡಿದರು. ಉಳಿದವರು ಬಡಿಗೆ ಹಾಗೂ ಕಲ್ಲುಗಳಿಂದ ನಮಗೆಲ್ಲಾ ಬಡಿದರು.

4) ಆರೋಪಿತರು ಬಡಿದ ಬಡಿಗೆಗಳನ್ನು ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಮು.ಮಾ.1 ರಿಂದ 19 ತೋರಿಸಲಾಗಿ ಅವುಗಳಿಂದಲೇ ಆರೋಪಿತರು ಬಡಿದಿದ್ದಾಗಿ ಗುರುತಿಸುತ್ತಾರೆ.

5) ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಮನೆಯ ಮುಂದಿರುವ 10 ಎಕರೆ ಜಮೀನು ವಿಚಾರವಾಗಿ ನಮಗೆ ಹಾಗೂ ಆರೋಪಿತರಿಗೆ ಬಹಳ ವರ್ಷಗಳಿಂದ ಜಗಳ ಇತ್ತು ಎಂದರೆ

ಸರಿ.

2) ದಿನಾಂಕಃ 20.04.2014 ರಂದು ಸಂಜೆ 05.00 ಗಂಟೆ ಸುಮಾರಿಗೆ ನಮ್ಮ ಪಾಲಿಗೆ ಬಂದ ಜಮೀನದಲ್ಲಿ ಗಳೆ ಹೊಡೆಯುತ್ತಿದ್ದಾಗ 3ನೇ ಆರೋಪಿ ಬಂದು ಗಳೆ ಹೊಡೆಯಬೇಡಿರಿ ಅಂತಾ ಹರಕತ ಮಾಡಿದ ಎಂದರೆ ಸರಿ. ಆ ಕಾಲಕ್ಕೆ ಚಾ.ಸಾ.12 ಮತ್ತು 13 ರವರನ್ನು ಕರೆಸಿ ಆರೋಪಿತರಿಗೆ ಬುದ್ಧಿವಾದ ಹೇಳಿಸಿದೇವು ಎಂದರೆ ಸರಿ. ಆ ಹಿರಿಯರ ಮಾತು ಕೇಳದೇ ಆರೋಪಿತರು ಕೈಯಲ್ಲಿ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ನಮಗೆ ಹೇಳದೇ ಕೇಳದೇ ಗಳೆ ಹೊಡೆಯುತ್ತಿದ್ದೀರಿ ಅಂತಾ ಅಂದರು ಎಂದರೆ ಸರಿ. ಆ ಕಾಲಕ್ಕೆ ಸೂಳೆಮಕ್ಕಳಾ, ಬೋಸಡಿಮಕ್ಕಳಾ ಅಂತಾ ಅವಾಚ್ಯವಾಗಿ ಆರೋಪಿತರು ನಮಗೆ ಬೈದರು ಎಂದರೆ ಸರಿ. ಮೊದಲಿಗೆ ನನ್ನ ಮಾವ ಸಿದ್ದಪ್ಪನಿಗೆ 1 ಮತ್ತು 2ನೇ ಆರೋಪಿತರು ಬಡಿಗೆ ಹಾಗೂ ಕಲ್ಲುಗಳಿಂದ ತಲೆಗೆ ಹಾಗೂ ಕೈಗೆ ಬಡಿದರು ಎಂದರೆ ಸರಿ. ಬಿಡಿಸಲು ಹೋದ ನನಗೆ ಲಗಮಾ , ಯಲ್ಲಪ್ಪಾ ಮತ್ತು ಕಮಲವ್ವಾ ಬಡಿಗೆಯಿಂದ ಬಡಿದರು ಎಂದರೆ ಸರಿ. ಉಳಿದವರೆಲ್ಲಾ ಬಡಿಗೆಗಳಿಂದ ಮತ್ತು ಕಲ್ಲುಗಳಿಂದ ನಮ್ಮವರಿಗೆಲ್ಲಾ ಹೊಡೆದು ಗಾಯ ಪಡಿಸಿದರು ಎಂದರೆ ಸರಿ. ಆಗ ನಮಗಾದ ಗಾಯಗಳಿಗೆ ನಾವು ಚಿಕ್ಕೋಡಿ ಆಸ್ಪತ್ರೆಗೆ ಬಂದು ತೋರಿಸಿಕೊಂಡು ನಂತರ ಚರಾಟೆ ಆಸ್ಪತ್ರೆಯಲ್ಲಿ ಉಪಚಾರಗೊಂಡೇವು ಎಂದರೆ ಸರಿ. ಆ ಕುರಿತು ಹೇಳಿದೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ–** 2, 4, 7, 9, 11 **ರಿಂದ** 14 **ಮತ್ತು** 16 **ನೇ ಆರೋಪಿತರ ಪರಃ ಶ್ರೀ ಎಸ.ಎಸ.ಡಿ.ವಕೀಲರಿಂದ** :

1) ನಮಗೆ ಹಾಗೂ ಅರೋಪಿತರಿಗೆ 12 ವರ್ಷಗಳಿಂದ ನ್ಯಾಯ ಇದೆ. ನಮ್ಮ ಮತ್ತು ಆರೋಪಿತರ ಮದ್ಯೆ ಹೊಲದಲ್ಲಿ ಪಾಲು ವಿಭಾಗವಾಗಿ ಒಬ್ಬರಿಗೊಬ್ಬರು ಹರಕತ್ತು ಮಾಡಬಾರದು ಅಂತಾ ಲೋಕ ಅದಾಲತನಲ್ಲಿ ರಾಜಿಯಾಗಿದೆ ಎಂದರೆ ಸರಿ.

2) ನಾವೆಲ್ಲಾ ಕೂಡಿ ಆರೋಪಿತರ ವಿರುದ್ದ ಅಟ್ರಾಸಿಟಿ ಕೇಸು ಹಾಕಿದ್ದೇವು ಹಾಗೂ ಅದು ಈಗ ಮುಗಿದು ಹೋಗಿದೆ ಎಂದರೆ ಸರಿ.

3) ಆರೋಪಿತರ ಜಮೀನು ಮೇಲೆ ಖೊಟ್ಟಿ ಸಹಿ ಮಾಡಿ ನಾವು ಸಾಲ ಪಡೆದಿದ್ದೇವು ಎಂದರೆ ಸರಿಯಲ್ಲ. ಆ ಕುರಿತು ಕ್ರಿಮಿನಲ ಕೇಸು ಇದೆ ಎಂದರೆ ಸರಿ.

4) ನಮ್ಮ ಪಾಲಿನ ಜಮೀನನ್ನು ನಾವು ಈಗ ಮಾರಾಟ ಮಾಡಿದ್ದು ನಮಗೆ ಊರಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ.

5) ಜಗಳವಾದ ದಿನ ಆರೋಪಿತರು ಬರುವುದನ್ನು ನಾನು ನೋಡಿಲ್ಲ. ಟ್ರ್ಯಾಕ್ಟರ ಯಾರದು ಅಂತಾ ಗೊತ್ತಿಲ್ಲ. 4–5 ಸಾಲ ಗಳೆ ಹೊಡೆದಿದ್ದರು. ಆರೋಪಿತರು ಹೊಲದಲ್ಲಿ ಯಾಕೆ ಗಳೆ ಹೊಡೆಯುತ್ತಿದ್ದೀರಿ ಅಂತಾ ಆ ದಿನ

4–5 ಸಾಲು ಗಳೆ ಹೊಡೆಯುವ ಕಾಲಕ್ಕೆ ತಕರಾರು ಮಾಡಿಲ್ಲ. ಗಳೆ ಹೊಡೆದ ಜಾಗ ನಮ್ಮ ಮನೆಯಿಂದ ಅರ್ಧ ಕಿ.ಮೀ ದೂರದಲ್ಲಿತ್ತು. ನಾನು ಜಾಗಾಕ್ಕೆ ಹೋಗುವ ಮುಂಚೆ 7–8 ಜನ ಸೇರಿದ್ದರು. ಹೊರಗಿನವರು ನಿಂತು ನೋಡುತ್ತಿದ್ದರು. ಆದರೆ ಜಗಳ ಬಿಡಿಸಲಿಲ್ಲ.

6) ಯಾರು ಯಾರು ಯಾರಿಗೆ ಯಾವುದರಿಂದ ಎಲ್ಲಿಗೆ ಬಡಿಯುತ್ತಿದ್ದರು ಅಂತಾ ಸ್ಪಷ್ಟವಾಗಿ ಹೇಳಲು ಬರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಮಾಯಪ್ಪನಿಗೆ ಹಾಲಪ್ಪಾ , ಲಕ್ಷ್ಮಣ, ಮುತ್ತೆಪ್ಪಾ , ನಿಂಗಪ್ಪಾ ಬಡಿಗೆಯಿಂದ ಬೆನ್ನು , ಕೈಗೆ ಹಾಗೂ ಮೈಮೇಲೆಲ್ಲಾ ದುಂಡಾಗಿ ಬಡಿದಿದ್ದಾರೆ. ಆ ರೀತಿ ನಾನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿ. ಪೋಲಿಸರು ನನ್ನ ಹೇಳಿಕೆ ತೆಗೆದುಕೊಂಡಿಲ್ಲ ಎಂದರೆ ಸರಿ. ರಕ್ತಗಾಯಗಳಾಗಿದ್ದವು. ಆ ರೀತಿ ರಕ್ತ ಮೈಮೇಲಿನ ಬಟ್ಟೆಗಳಿಗೂ ಹತ್ತಿದ್ದವು. ಅವುಗಳನ್ನು ಪೋಲಿಸರು ನೋಡಿದ್ದರು. ಪೋಲಿಸರು ಜಾಗಾಕ್ಕೆ ಬಂದಿಲ್ಲ. ದವಾಖಾನೆಯಲ್ಲಿ ನೋಡಿದ್ದರು. ರಕ್ತವಾದ ಬಟ್ಟೆಗಳನ್ನು ಪೋಲಿಸರು ತೆಗೆದುಕೊಂಡು ಹೋದ ಬಗ್ಗೆ ನನಗೆ ಆಗ ಪ್ರಜ್ಞೆ ಇಲ್ಲದ ಕಾರಣ ಗೊತ್ತಿಲ್ಲ. ನನಗೆ 2 ದಿನಗಳ ಕಾಲ ಪ್ರಜ್ಞೆ ಇರಲಿಲ್ಲ.

7) ಜಗಳವಾದ ಸ್ಥಳದಲ್ಲಿ ತುಳಕಲು ಆಗಿರಲಿಲ್ಲ.

8) ನನ್ನ ಸಾಕ್ಷ್ಯದಲ್ಲಿ ಹೇಳಿದಂತೆ ಆರೋಪಿತರು ಯಾವುದೇ ದಿನ ನಮ್ಮೊಂದಿಗೆ ಜಗಳ ತೆಗೆದಿಲ್ಲ ಬಡಿಗೆಗಳು ಮತ್ತು ಕಲ್ಲುಗಳಿಂದ ನಮಗೆ ಹೊಡೆಬಡೆ ಮಾಡಿಲ್ಲ, ನಮಗಾದ ಗಾಯಗಳಿಗೂ, ಮು.ಮಾ.ಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಆರೋಪಿತರಿಂದ ಜಮೀನು ಕಿತ್ತುಕೊಳ್ಳಬೇಕು ಅಂತಾ ಯಾವುದೇ ಘಟನೆ ನಡೆಯದೇ ಇದ್ದರೂ ಕೂಡಾ ನಾವು ಮನೆ ಮಂದಿ ಕೂಡಿ ಆರೋಪಿತರ ವಿರುದ್ಧ ಸುಳ್ಳು ಕೇಸು ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.